1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:2794/2016

ಚಾಸಾ:10 ಪ್ರಾಸಾ:6

ದಿನಾಂಕ: 09.07.2026

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಉದಯ ಆಚಾರ್ |
| ತಂದೆಯ ಹೆಸರು | : | ರತ್ನಾಕರ ಆಚಾರ್ |
| ವಯಸ್ಸು | : | 57 ವರ್ಷ |
| ಉದ್ಯೋಗ | : | ವ್ಯವಹಾರ |
| ವಾಸ ಸ್ಥಳ | : | ಕುಂದಾಪುರ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ಈಗ ಸಾಕ್ಷಿಗೆ ನಿಪಿ-2ನ್ನು ತೋರಿಸಲಾಗಿದ್ದು ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸದ್ರಿ ಸಹಿಯನ್ನು ದಿ: 16-05-2016 ರಂದು ಬೆಳಗ್ಗೆ 10 ರಿಂದ 11 ಗಂಟೆ ಸಮಯದಲ್ಲಿ ಪಂಚನಾಮೆಗೆ ಪೊಲೀಸರು ಚಾಸಾ-2ರವರ ಮನೆಗೆ ಕರೆದಿದ್ದು ಚಾಸಾ-1 ರವರು ಸ್ಥಳವನ್ನು ತೋರಿಸಿದಂತೆ ನನ್ನ ಹಾಗೂ ಚಾಸಾ-11 ರವರ ಸಮಕ್ಷಮ ಪಂಚನಾಮೆ ಜರುಗಿಸಿರುತ್ತಾರೆ.

**ಪಾಟೀ ಸವಾಲು: ಆರೋಪಿತರ ಪರ ವಕೀಲರಾದ ಶ್ರೀ ಎಂ ಡಿ ಎಸ್ ರವರಿಂದ:**

ಚಾಸಾ-1 ರವರು ನಿಮಗೆ ಏನಾಗಬೇಕು ಎಂದರೆ ಸಾಕ್ಷಿ ಅಕ್ಕನ ಮಗಳು ಎಂದು ನುಡಿಯುತ್ತಾರೆ. ನಿಮ್ಮ ಮನೆ ಇರುವುದು ಎಲ್ಲಿ ಎಂದರೆ ಸಾಕ್ಷಿ ರಾಮ ಮಂದಿರದ ರಸ್ತೆ ಎಂದು ನುಡಿಯುತ್ತಾರೆ. ನಿಮ್ಮ ಮನೆಯಿಂದ ಚಾಸಾ-1 ರವರ ಮನೆಗೆ ಎಷ್ಟು ದೂರ ಎಂದರೆ ಸಾಕ್ಷಿ 1 ಕಿ.ಮೀ ಒಳಗೆ ಎಂದು ನುಡಿಯುತ್ತಾರೆ. ಯಾವ ಪೊಲೀಸರು ನಿಮಗೆ ಫೋನು ಮಾಡಿದ್ದರು ಎಂದರೆ ಸಾಕ್ಷಿ ಹೆಸರು ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಆಗ ನೀವು ಎಲ್ಲಿ ಇದ್ದಿದ್ದೀರಿ ಎಂದರೆ ಸಾಕ್ಷಿ ನನ್ನ ಅಂಗಡಿಯಲ್ಲಿ ಎಂದು ನುಡಿಯುತ್ತಾರೆ. ಪೋಲಿಸರು ಎಷ್ಟು ಗಂಟೆಗೆ ಕಾಲ್ ಮಾಡಿದ್ದರು ಎಂದರೆ ಸಾಕ್ಷಿ 9-45 ಎಂದು ನುಡಿಯುತ್ತಾರೆ. ಎಲ್ಲಿಂದ ಫೋನು ಮಾಡಿದ್ದರು ಎಂದರೆ ಸಾಕ್ಷಿ ಗೊತ್ತಿರುವುದಿಲ್ಲ ಹಾಗೂ ನಾನು ಕೇಳಿರುವುದಿಲ್ಲ ಎಂದು ನುಡಿಯುತ್ತಾರೆ.

ನೀವು ಹೋದಾಗ ಪೊಲೀಸರು ಇದಿದ್ದರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ ಹಾಗೂ ಸಾಕ್ಷಿ ಮುಂದುವರೆದು ಮಹೇಶ್ ರವರು ಇದ್ದರು ಎಂದು ನುಡಿಯುತ್ತಾರೆ. ಚಾಸಾ-1 ರವರ ಮನೆಯ ಅಕ್ಕಪಕ್ಕ ತುಂಬಾ ಮನೆಗಳು ಇವೆಯಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನೀವು ಹೋಗುವಾಗಲೇ ದಾಖಲೆ ಬರೆದಿದ್ದರಾ ಎಂದರೆ ಸಾಕ್ಷಿ ಇಲ್ಲ ನಾವು ಹೋದ ನಂತರ ಮನೆಯ ಹಾಲ್ ನಲ್ಲಿ ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ಸದ್ರಿ ದಿನ ಬಂದಂತಹ ಪೊಲೀಸ್ ಯಾರು ಎಂದು ನಿಮಗೆ ಗೊತ್ತಿದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಅಕ್ಕಪಕ್ಕದವರು ಯಾರಾದರೂ ಬಂದಿದ್ದರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಚಾಸಾ-11 ರವರು ನಿಮಗೆ ಏನಾಗಬೇಕು ಎಂದರೆ ಸಾಕ್ಷಿ ನನ್ನ ಅಳಿಯನ ಸ್ನೇಹಿತ ಎಂದು ನುಡಿಯುತ್ತಾರೆ.

ರೂಂನ ಒಳಗಡೆ ಪಂಚನಾಮೆ ಮಾಡಿರುತ್ತಾರಾ ಎಂದರೆ ಸಾಕ್ಷಿ ಇಲ್ಲ ಹಾಲ್ ನಲ್ಲಿ ಎಂದು ನುಡಿಯುತ್ತಾರೆ. ನೀವು ಹೋದಾಗ ಪೊಲೀಸರು ಕೋಣೆಯಲ್ಲಿ ಹೋಗಿರುತ್ತಾರಾ ಎಂದರೆ ಸಾಕ್ಷಿ ನಾನು ಹಾಲ್ ನಲ್ಲಿ ಇದ್ದೇನು ಎಂದು ನುಡಿಯುತ್ತಾರೆ. ಪೊಲೀಸರು ಮಹಜರಿಗೆ ಸಹಿ ಬೇಕು ಎಂದು ಹೇಳಿದ್ದರಿಂದ ಸಹಿ ಹಾಕಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದ್ರಿ ದಾಖಲೆಗಳಲ್ಲಿ ಪೊಲೀಸರು ಏನು ಬರೆದಿದ್ದಾರೆ ಎಂದು ನಿಮಗೆ ಹೇಳಲು ಬರುತ್ತದೆಯೇ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನೀವು ಸಹಿಯನ್ನು ಕುಂದಾಪುರ ಠಾಣೆಯಲ್ಲಿ ಹಾಕಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ನಿಮ್ಮ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರುವುದಿಲ್ಲ, ಸದ್ರಿ ಸಹಿಯನ್ನು ನೀವು ಠಾಣೆಯಲ್ಲಿ ಹಾಕಿರುತ್ತೀರಿ ಹಾಗೂ ಚಾಸಾ-1 ರವರು ನಿಮ್ಮ ಸಮಕ್ಷಮ ಯಾವುದೇ ಸ್ಥಳವನ್ನು ತೋರಿಸಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**(ಶ್ರೀನಿವಾಸ ಕೆ.ಆರ್)**
**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**